**AUGUST 02, 2025**

**AKASHAVANI - DHARWAD**

**PRADESH SAMACHARA (KANNADA) 7.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

- **ಖಾದಿ ಹಾಗೂ ಗ್ರಾಮೀಣ ಗೃಹ ಉದ್ಯಮ ಉತ್ತೇಜಿಸಲು, ರಾಜ್ಯ ಖಾದಿ ಮಂಡಳಿ, ಯೋಜನೆ.**
- **ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ; ವಾರಾಣಸಿಯಲ್ಲಿ ಇಂದು, ಪ್ರಧಾನಮಂತ್ರಿಯವರಿಂದ, 20ನೇ ಕಂತು ಬಿಡುಗಡೆ.**
- **ಅಂಗ ದಾನ ಮಾಡಿ, ಜೀವ ಉಳಿಸಿ; 15ನೇ ಭಾರತೀಯ ಅಂಗ ದಾನ ದಿನಾಚರಣೆ, ಜನ ಜಾಗ್ರತಿ.**
- **ಕನ್ನಡದ, 'ಕಂದೀಲು' ಸಿನೆಮಾ; ರಾಷ್ಟ್ರೀಯ, ಅತ್ಯುತ್ತಮ ಪ್ರಾದೇಶಿಕ ಚಲನಚಿತ್ರ ಪ್ರಶಸ್ತಿಗೆ ಭಾಜನ.**

<><><>

**ಈಗ ವಾರ್ತೆಗಳ ವಿವರ**

<><><>

**ಉಡುಪಿ, ದಕ್ಷಿಣಕನ್ನಡ, ಉತ್ತರಕನ್ನಡ, ಚಿಕ್ಕಮಗಳೂರು ಹಾಗೂ ಕೊಡಗು ಜಿಲ್ಲೆಗಳಲ್ಲಿ ಖಾದಿ ಚಟುವಟಿಕೆ ಉತ್ತೇಜಿಸಲು, ಆಸಕ್ತ ನೋಂದಾಯಿತ ಸಂಸ್ಥೆಗಳಿಗೆ, ಚರಕ ಹಾಗೂ ಮಗ್ಗಗಳ ಖರೀದಿಗೆ ಪ್ರೋತ್ಸಾಹ ನೀಡಲಾಗುವುದು ಎಂದು, ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಅಧ್ಯಕ್ಷ ಬಸನಗೌಡ ತುರವಿಹಾಳ ತಿಳಿಸಿದ್ದಾರೆ. ದಾವಣಗೆರೆಯಲ್ಲಿ ಖಾದಿ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ ಉದ್ಘಾಟಿಸಿ ಅವರು ಮಾತನಾಡಿದರು.**

<><><>

**ಬಸನಗೌಡ ತುರವಿಹಾಳ ಧ್ವನಿ 28 ಸೆಕೆಂದುಗಳು**

<><><>

ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ 20ನೇ ಕಂತನ್ನು, ಪ್ರಧಾನಮಂತ್ರಿ ನರೇಂದ್ರ ಮೋದಿ, ಸ್ವ ಕ್ಷೇತ್ರ ಉತ್ತರಪ್ರದೇಶದ ವಾರಾಣಸಿಯಲ್ಲಿ ಬಿಡುಗಡೆ ಮಾಡಲಿದ್ದಾರೆ. ಬೆಳಗ್ಗೆ 10 ಗಂಟೆಗೆ ಕಾರ್ಯಕ್ರಮ ಆಯೋಜಿತವಾಗಿದೆ. ಪ್ರಧಾನಮಂತ್ರಿಯವರು ಬಳಿಕ, ಆನ್ಲೈನ್ ವೇದಿಕೆಯಲ್ಲಿ, ದೇಶದ ರೈತರನ್ನುದ್ದೇಶಿಸಿ ಮಾತನಾಡಲಿದ್ದಾರೆ. ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ಧಾರವಾಡ ಕೃಷಿ ವಿಶ್ವವಿದ್ಯಾಲಯದ, ರೈತರ ಜ್ಞಾನಾಭಿವೃದ್ಧಿ ಕೇಂದ್ರದಲ್ಲಿ, ಇಂದು ಬೆಳಗ್ಗೆ 10 ಗಂಟೆಗೆ, ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಬಿಡುಗಡೆ ಕಾರ್ಯಕ್ರಮದಲ್ಲಿ, ಭಾಗವಹಿಸಲಿದ್ದಾರೆ. ಕೇಂದ್ರ ರೇಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ, ಸಚಿವ ಕೆ.ಎಚ್.ಮುನಿಯಪ್ಪ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲೂಕು, ಹಾಡೋನಹಳ್ಳಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಬಿಡುಗಡೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

<><><>

ಕೇಂದ್ರದ ಸಂಪೂರ್ಣತಾ ಅಭಿಯಾನದಡಿ, ಕಲಬುರಗಿ ಜಿಲ್ಲೆಯ, ಅಫಜಲಪುರ, ಕಾಳಗಿ ಹಾಗೂ ಶಹಾಬಾದ್ ತಾಲೂಕುಗಳಲ್ಲಿ, ಮಕ್ಕಳಲ್ಲಿ ರಕ್ತಹೀನತೆ ಮತ್ತು ಅಪೌಷ್ಟಿಕತೆ ಹೋಗಲಾಡಿಸಿ, ನಿಗದಿತ ಗುರಿ ಸಾಧಿಸಿದ ಹಿನ್ನೆಲೆ, ತಾಲೂಕಾಡಳಿತದ ಸಿಬ್ಬಂದಿಗೆ, ಸಂಪೂರ್ಣತಾ ಅಭಿಯಾನ, ಸಮ್ಮಾನ್ ಸಮಾರೋಹ ಪ್ರಶಸ್ತಿ ಪ್ರದಾನಿಸಿ, ಶಾಸಕ ಅಲ್ಲಮಪ್ರಭು ಪಾಟೀಲ ಗೌರವಿಸಿದರು. ಕಲಬುರಗಿ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅಭಿಯಾನದ ಗುರಿ ಸಾಧನೆಗೆ ಸಹಕರಿಸಿದ, ಎಲ್ಲ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು, ಅವರು ಅಭಿನಂದಿಸಿದರು.

<><><>

ನವೋದ್ಯಮಗಳ ಸಂಖ್ಯೆ ಭಾರತದಲ್ಲಿ ಒಂದು ಲಕ್ಷಕ್ಕೂ ಹೆಚ್ಚು; ಭಾರತ ಈಗ, ವಿಶ್ವದ ಮೂರನೇ ಅತಿ ದೊಡ್ಡ, ನವೋದ್ಯಮಗಳ ಇನ್‌ಕ್ಯುಬೇಷನ್ ವ್ಯವಸ್ಥೆ ಹೊಂದಿದ ರಾಷ್ಟ್ರ ಎಂದು, ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಹೇಳಿದ್ದಾರೆ. ಕೋಲಾರದಲ್ಲಿ ಜರುಗಿದ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ, 5ನೇ ಘಟಿಕೋತ್ಸವದಲ್ಲಿ, ಪದವಿಗಳನ್ನು ಪ್ರದಾನಿಸಿ ಅವರು ಮಾತನಾಡಿದರು. ಉನ್ನತ ಶಿಕ್ಷಣ ಸಂಸ್ಥೆಗಳು ಸ್ಟಾರ್ಟ್‌ಅಪ್, ಇನ್ಕ್ಯುಬೇಶನ್ ಕೇಂದ್ರ, ತಂತ್ರಜ್ಞಾನ ಅಭಿವೃದ್ಧಿ ಮೂಲಕ ಸಂಶೋಧನೆ ಹಾಗೂ ನಾವಿನ್ಯತೆಯನ್ನು ಉತ್ತೇಜಿಸಬೇಕು ಎಂದರು. ರಾಧಾಕೃಷ್ಣ, ಹಾಲಾಡಿ ಶ್ರೀನಿವಾಸ ಶೆಟ್ಟಿ, ಹಾಗೂ ಪಿಚ್ಚಳ್ಳಿ ಶ್ರೀನಿವಾಸ ಅವರಿಗೆ ಗೌರವ ಡಾಕ್ಟರೆಟ್ ಪದವಿಗಳನ್ನು, ಕುಲಾಧಿಪತಿಗಳು ಪ್ರದಾನಿಸಿ, ಗೌರವಿಸಿದರು. 46 ವಿದ್ಯಾರ್ಥಿಗಳು ಚಿನ್ನದ ಪದಕಗಳಿಗೆ ಭಾಜನರಾದರು.

<><><>

ವಿಜಯಪುರ ಜಿಲ್ಲೆ, ಆಲಮಟ್ಟಿಯ, ಶ್ರೀ ಲಾಲ ಬಹಾದ್ದೂರ ಶಾಸ್ತ್ರಿ ಜಲ ಸಂಗ್ರಹಾಗಾರದ ಎತ್ತರವನ್ನು, 519 ಮೀಟರ್ ನಿಂದ, 524 ಮೀಟರ್ ಗೆ ಎತ್ತರಿಸುವುದರಿಂದ, ಸಾಂಗ್ಲಿ ಮತ್ತು ಕೊಲ್ಹಾಪುರದಲ್ಲಿ ಪ್ರವಾಹ ಉಂಟಾಗದು ಎಂದು, ವಿಜಯಪುರ ಜಿಲ್ಲೆ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ, ಸ್ಪಷ್ಟ ಪಡಿಸಿದ್ದಾರೆ. ಎಕ್ಸ್ ಮಾಧ್ಯಮದಲ್ಲಿ ಈ ಕುರಿತು ಸ್ಪಷ್ಟನೆ ನೀಡಿ, ಮಹಾರಾಷ್ಟ್ರ ರಾಜ್ಯದ ಆತಂಕ ಮತ್ತು ಆಕ್ಷೇಪಣೆಗೆ ಆಧಾರವಿಲ್ಲ, ಎಂದಿದ್ದಾರೆ. ದಾಖಲೆಗಳ ಪ್ರಕಾರ, ಆಲಮಟ್ಟಿ ಅಣೆಕಟ್ಟೆ ನಿರ್ಮಾಣಕ್ಕೂ ಮುನ್ನ, ಸಾಂಗ್ಲಿ ಭಾಗದಲ್ಲಿ ಪ್ರವಾಹ ಸಂಭವಿಸುತ್ತಿತ್ತು ಎಂದು, ತಿಳಿಸಿದ್ದಾರೆ.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರಿಯುವುದು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ

<><><>

ಅಂಗ ದಾನ ಹಾಗೂ ಅಂಗ ಆಕಾಂಕ್ಷಿಗಳ, ರಕ್ತದ ಮಾದರಿಗಳ ಹೊಂದಾಣಿಕೆ ಪರೀಕ್ಷೆಗಾಗಿ, ಜಿಲ್ಲಾ ಆಸ್ಪತ್ರೆಗಳ ಮಟ್ಟದಲ್ಲಿ, ಪ್ರಯೋಗಾಲಯ ಸ್ಥಾಪಿಸಲು, ರಾಜ್ಯ ಸರ್ಕಾರ ಯೋಜಿಸಿದೆ ಎಂದು, ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ ಗುಂಡೂರಾವ್ ತಿಳಿಸಿದ್ದಾರೆ. ಮಂಗಳೂರಿನ ದೇರಳಕಟ್ಟೆಯಲ್ಲಿ, ಅಂಗ ದಾನ ಜಾಗ್ರತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಮಾತನಾಡಿದರು. ಮಂಗಳೂರಿನ ವೆನ್ಲಾಕ್ ಆಸ್ಪತ್ರೆ, ಮೈಸೂರು ಹಾಗೂ ಶಿವಮೊಗ್ಗ ಜಿಲ್ಲೆ ಸರ್ಕಾರಿ ಆಸ್ಪತ್ರೆಗಳಲ್ಲಿ, ಪ್ರಯೋಗಾಲಯ ಸ್ಥಾಪನೆಯಾಗಲಿದೆ. ಅಂಗ ದಾನದ ಪ್ರತಿಜ್ಞೆಯಲ್ಲಿ, ಕರ್ನಾಟಕ, ದೇಶಕ್ಕೆ ಮೂರನೇ ಸ್ಥಾನದಲ್ಲಿದೆ, ಎಂದರು.

<><><>

ಪ್ರಧಾನಮಂತ್ರಿ ಕಿರು ಆಹಾರ ಉದ್ದಿಮೆಗಳ, ನಿಯಮಬದ್ಧಗೊಳಿಸುವಿಕೆ ಯೋಜನೆ ಅಡಿ, ಫಲಾನುಭವಿಯಾದ, ಧಾರವಾಡ ತಾಲೂಕು, ಹಾರೋಬೆಳವಡಿ ಗ್ರಾಮದ ಮಹದೇವಪ್ಪ ಹಾಗೂ ಕವಿತಾ ದಂಪತಿ, ಶ್ರೀಶೈಲ ಮಲ್ಲಿಕಾರ್ಜುನ ಗೃಹ ಉದ್ದಿಮೆ ಸ್ಥಾಪಿಸಿ, ಸ್ವಾವಲಂಬಿ ಉದ್ಯಮಿಗಳಾಗಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಮಹದೇವಪ್ಪ ಮಾಹಿತಿ ನೀಡಿದ್ದಾರೆ.

<><><>

ಮಹದೇವಪ್ಪ ಧ್ವನಿ 28 ಸೆಕೆಂದುಗಳು

<><><>

ಕನ್ನಡದ "ಕಂದೀಲು" ಸಿನೆಮಾ, 2023 ನೇ ಸಾಲಿನ 71ನೇ ರಾಷ್ಟ್ರೀಯ ಅತ್ಯುತ್ತಮ ಪ್ರಾದೇಶಿಕ ಚಲನಚಿತ್ರ ಪ್ರಶಸ್ತಿಗೆ ಭಾಜವಾಗಿದೆ. ಆಯ್ಕೆ ಸಮಿತಿ ಅಧ್ಯಕ್ಷ ಪಿ.ಶೇಷಾದ್ರಿ ಹಾಗೂ ಆಶುತೋಷ್ ಗೌವಾರಿಕರ, ರಾಷ್ಟ್ರೀಯ ಚಲಚಿತ್ರ ಪ್ರಶಸ್ತಿಗೆ ಆಯ್ಕೆಯಾದ, ಚಲನಚಿತ್ರಗಳ ಮಾಹಿತಿಯನ್ನು, ಹೊಸ ದಿಲ್ಲಿಯಲ್ಲಿ ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ, ಅಶ್ವಿನಿ ವೈಷ್ಣವ್ ಅವರಿಗೆ ಸಲ್ಲಿಸಿದ್ದಾರೆ. ಹಿಂದಿ ಸಿನೆಮಾ ಜವಾನ್ ಚಿತ್ರದ ಪಾತ್ರಕ್ಕಾಗಿ, ಶಾರುಖ್ ಖಾನ್ ಅತ್ಯುತ್ತಮ ನಟ ಹಾಗೂ 'ಮಿಸೆಸ್ ಚಟರ್ಜಿ v/s ನಾರ್ವೆ' ಚಿತ್ರದ ಅಭಿನಯಕ್ಕಾಗಿ, ರಾಣಿ ಮುಖರ್ಜಿ ಅತ್ಯುತ್ತಮ ನಟಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

<><><>

ಆಗಸ್ಟ್ 15, 79ನೇ ಸ್ವಾತಂತ್ರ್ಯ ದಿನಾಚರಣೆ, ತಮ್ಮ ಭಾಷಣ ರೂಪಿಸಲು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಸಾರ್ವಜನಿಕರಿಂದ ಸಲಹೆ ಬಯಸಿದ್ದಾರೆ. ಈ ವರ್ಷದ ಸ್ವಾತಂತ್ರ್ಯ ದಿನ ಸಮೀಪಿಸುತ್ತಿರುವಾಗ, ಸಹ ಭಾರತೀಯರಿಂದ ಸಲಹೆಗಳನ್ನು ಕೇಳಲು ತಾವು ಕಾತುರರಾಗಿದ್ದಾಗಿ, ತಿಳಿಸಿದ್ದಾರೆ. ಸಾರ್ವಜನಿಕರು MyGov ಹಾಗೂ NaMo ಆಪ್‌ಗಳ ಮೂಲಕ ಅಭಿಪ್ರಾಯ ಹಂಚಿಕೊಳ್ಳಲು, ಕೋರಿದ್ದಾರೆ.

<><><>

ವ್ಯಸನಗಳ ಸ್ವರೂಪ, ಆಧುನಿಕ ಜಗತ್ತಿನಲ್ಲಿ ಬದಲಾಗಿದೆ; ಆನ್‌ಲೈನ್ ಜೂಜು, ಗೇಮ್ಸ್‌ನಂತಹ ಡಿಜಿಟಲ್ ವ್ಯಸನಗಳು, ಯುವಜನರನ್ನು ಆವರಿಸಿವೆ; ಖಿನ್ನತೆಗೆ ದೂಡುವ ಆನ್‌ಲೈನ್ ವ್ಯಸನಗಳಿಂದ, ಯುವಜನತೆ ದೂರವಿರಬೇಕು ಎಂದು, ಧಾರವಾಡ ಜಿಲ್ಲಾಧಿಕಾರಿ ದಿವ್ಯಾ ಪ್ರಭು, ಅಭಿಪ್ರಾಯ ಪಟ್ಟಿದ್ದಾರೆ. ಧಾರವಾಡ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನಗಳ ಸಂಸ್ಥೆ – ಡಿಮ್ಹಾನ್ಸ್ ನಲ್ಲಿ ಜರುಗಿದ, ವ್ಯಸನಮುಕ್ತಿ ದಿನಾಚರಣೆಗೆ ಚಾಲನೆ ನೀಡಿ, ಮಾತನಾಡಿದರು. ಶ್ರೀ ಮುರುಘಾಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಇಳಕಲ್ ಚಿತ್ತರಗಿ ಸಂಸ್ಥಾನ ಮಠದ, ಶ್ರೀ ಮಹಾಂತ ಶಿವಯೋಗಿಗಳ, ಮಹಾಂತ ಜೋಳಿಗೆಯ ಚಟ ಭಿಕ್ಷೆಯ ಸಾಮಾಜಿಕ ಕಾರ್ಯಗಳನ್ನು ಸ್ಮರಿಸಿ, ಗೌರವ ಅರ್ಪಿಸಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ಖಾದಿ ಹಾಗೂ ಗ್ರಾಮೀಣ ಗೃಹ ಉದ್ಯಮ ಉತ್ತೇಜಿಸಲು, ರಾಜ್ಯ ಖಾದಿ ಮಂಡಳಿ, ಯೋಜನೆ.

ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ; ವಾರಾಣಸಿಯಲ್ಲಿ ಇಂದು, ಪ್ರಧಾನಮಂತ್ರಿಯವರಿಂದ, 20ನೇ ಕಂತು ಬಿಡುಗಡೆ.

ಅಂಗ ದಾನ ಮಾಡಿ, ಜೀವ ಉಳಿಸಿ; 15ನೇ ಭಾರತೀಯ ಅಂಗ ದಾನ ದಿನಾಚರಣೆ, ಜನ ಜಾಗ್ರತಿ.

ಕನ್ನಡದ, 'ಕಂದೀಲು' ಸಿನೆಮಾ; ರಾಷ್ಟ್ರೀಯ, ಅತ್ಯುತ್ತಮ ಪ್ರಾದೇಶಿಕ ಚಲನಚಿತ್ರ ಪ್ರಶಸ್ತಿಗೆ ಭಾಜನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ

<><><>